ಸಿ.ಸಿ ನಂ. 2427 /2025 ಪಿಡಬ್ಲೂ-1

ದಿನಾಂಕಃ 29.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು - ಶ್ರೀ. ಎಂ.ಆರ್ ಎಸ್ ವಕೀಲರಿಂದ ಆರೋಪಿ ಪರ

ನಾನು ನಾಗಲಕ್ಷ್ಮೀ ರವರ ವಿರುದ್ದ ಸಲ್ಲಿಸಿರುವ ಚೆಕ್ ಪ್ರಕರಣ 3 ಲಕ್ಷ ದ್ದು ಆಗಿರುತ್ತದ್ದೆ. ರಮೇಶ್ ರವರ ವಿರುದ್ಧ 4 ಲಕ್ಷಕ್ಕೆ ಸಲ್ಲಿಸಿರುತ್ತೇನೆ. ಅಂಜುಂರವರ ವಿರುದ್ದ ರೂ. 2.75000-00 ಕ್ಕೆ ಸಲ್ಲಿಸಿರುತ್ತೇನೆ. ಟಿಪ್ಪರ್ ಮತ್ತು ಪಿಕಪ್ ವಾಹನ ಇರುತ್ತದೆ ಅದರಿಂದ ನನಗೆ ಆದಾಯ ಬರುತ್ತದೆ ಎನ್ನುವರು. ಸದರಿ ವಾಹನದಿಂದ ನನಗೆ ಎಷ್ಟು ಆದಾಯ ಬರುತ್ತದೆ ಎಂದು ತೋರಿಸಲು ದಾಖಲೆಗಳು ಇರುತ್ತದೆ ಅವುಗಳನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ.

ಸಾಗರದಲ್ಲಿ ಸಾಕಷ್ಟು ಟಿಪ್ಪರ್ ವಾಹನಗಳು ಇರುತ್ತದೆ ಎಂದರೆ ಸರಿ. ಹೆಚ್ಚಿನ ವಾಹನಗಳು ಇರುವ ಕಾರಣ ಬೇಡಿಕೆ ಕಡಿಮೆ ಇರುತ್ತದೆ ಮತ್ತು ನನಗೆ ಅದರಲ್ಲಿ ಆದಾಯ ಇಲ್ಲ ಎಂದರೆ ಸರಿಯಲ್ಲ. ನನಗೆ ಇದುವರೆಗೂ ಎಷ್ಟು ಲಾಭ ಬರುತ್ತದೆ ಎಂದು ನಾನು ಲೆಕ್ಕ ಹಾಕಿರುವುದಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ವಾಹನ ಇರುವುದಿಲ್ಲ ಆ ಕಾರಣ ನನಗೆ ಆದಾಯ ಬರುವ ಮೂಲಗಳು ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ಲೇಔಟ್ ಮಾಡಿ ನಿವೇಶನ ಮಾರಾಟ ಮಾಡು ಯಾವುದೇ ಸಂಸ್ಥೆಯನ್ನು ನೋಂದಣಿ ಮಾಡಿಸಿರುವುದಿಲ್ಲ ಮತ್ತು ಅದರ ಸಂಬಂಧ ದಾಖಲೆ ಇರುವುದಿಲ್ಲ ಎನ್ನುವರು. ನಾನು ಲೇಔಟ್ ಮಾಡಲು ಜಮೀನು ಖರೀದಿ ಮಾಡಿರುತ್ತೇನೆ. ನಾನು ಹೇಳಿದಂತೆ ಯಾವುದೇ ಲೇಔಟ್, ರಿಯಲ್ ಎಸ್ಟೇಟ್ ಮಾಡುವುದಿಲ್ಲ ಮತ್ತು ಸಾಮಾನುಗಳನ್ನು ಸರಬರಾಜು ಮಾಡುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ವ್ಯವಹಾರ ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ.

ನನ್ನ ಬಳಿ ಆದಾಯ ತೆರಿಗೆ ಪಾವತಿ ಮಾಡಿದ ದಾಖಲೆಗಳು ಇರುತ್ತದೆ. ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ವಾಹನಗಳ ಮೇಲೆ ಸಾಲ ಇರುತ್ತದೆ ಆದರೆ ಎಷ್ಟು ಎಂದು ನನಗೆ ಈಗ ನೆನಪಿಲ್ಲ ಎನ್ನುವರು. ನಿಪಿ-1 ನ್ನು ನಾನೇ ಬ್ಯಾಂಕಿಗೆ ನಗದೀಕರಣಕ್ಕೆ ಹಾಜರುಪಡಿಸಿರುತ್ತೇನೆ ದಿನಾಂಕ 3-3-2023 ರಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ನಿಪಿ- 1 ಮತ್ತು ನಿಪಿ-2 ಹೊರತುಪಡಿಸಿ ತಿಳುವಳಿಕೆ ನೋಟೀಸು ನೀಡಲು ನಮ್ಮ ವಕೀಲರಿಗೆ ನಾನು ಬೇರೆ ಯಾವುದೇ ದಾಖಲೆ ನೀಡಿರುವುದಿಲ್ಲ. ನಿಪಿ-3 ನ್ನು ದಿನಾಂಕ 6-4-2023 ರಂದು ನೀಡಲಾಗಿರುತ್ತದೆ. ನಿಪಿ-3 ರಲ್ಲಿ ನಾನು ಏನೂ ಕೆಲಸ ಮಾಡುತ್ತೇನೆಂದು ತಿಳಿಸಿರುವುದಿಲ್ಲ ಎಂದರೆ ಸರಿ.

2023 ರಲ್ಲಿ ಆರೋಪಿ ಕೆಲಸದಲ್ಲಿ ಇದ್ದರು. ಅವರ ಮಕ್ಕಳು ಉದ್ಯೋಗದಲ್ಲಿ ಇದ್ದರು ಮತ್ತು ಆರ್ಥಿಕವಾಗಿ ಸಾಮರ್ಥ್ಯರಾಗಿದ್ದರು ಎಂದರೆ ಸರಿಯಲ್ಲ. 2023 ರಲ್ಲಿ ಅವರು ಸಾಲ ಪಡೆಯವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಅವರು ನನ್ನ ಬಳಿ ಸಾಲ ಕೇಳಿಲ್ಲ ಮತ್ತು ಸಾಲ ಪಡೆದಿಲ್ಲ ಮತ್ತು ಸಾಲ ತೀರಿಸುವ ಸಲುವಾಗಿ ನಿಪಿ-1 ನ್ನು ನೀಡಿಲ್ಲ ಎಂದರೆ ಸರಿಯಲ್ಲ.

ನನ್ನ ಅತ್ತೆಯಿಂದ ನಾನು ನಿಪಿ-1 ನ್ನು ಪಡೆದುಕೊಂಡು ಅಕ್ರಮ ಲಾಭ ಗಳಿಸುವ ಸಲುವಾಗಿ ಈ ಸುಳ್ಳು ಪ್ರಕರಣವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಸಹಿಯ ಶಾಹಿಗೂ ಮತ್ತು ಉಳಿದ ಬರವಣಿಗೆಯ ಶಾಹಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಬರವಣಿಗೆಯನ್ನು ಆರೋಪಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆಗೆ ಭದ್ರತೆಗಾಗಿ ನೀಡಿದ್ದ ಚೆಕ್ ನ್ನು ನಾನು ಪಡೆದುಕೊಂಡು ಅದನ್ನು ಭರ್ತಿ ಮಾಡಿಕೊಂಡು ದುರುಪಯೋಗಪಡಿಸಿ ಕೂಂಡು ಈ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಕೇಸಿನ ನಿಪಿ-1 ರಿಂದ ನಿಪಿ-3 ದಾಖಲೆಗಳ ಮೇಲೆ ನಾನು ಯಾವುದೇ ಪರಿಹಾರ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಪೂರ್ವದಲ್ಲಿ ನಾನು ಯಾವುದೇ ನೋಟೀಸು ನೀಡಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ